ಹೊಸಕೋಟೆ ಯೋಜನಾ ಪ್ರಾಧಿಕಾರ

ಹೊಸಕೋಟೆ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ,
ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562 114,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

2016-17 ನೇ ಸಾಲಿನ ವಾರ್ಷಿಕ ವರದಿ

(01.04.2016 ರಿಂದ 31.03.2017 ರ ವರೆಗೆ

url. www.hoskote-pa.in

ಜೂನ್ - 2017

ಹೊಸಕೋಟೆ ಯೋಜನಾ ಪ್ರಾಧಿಕಾರ

ಹೊಸಕೋಟೆ

2016-17 ನೇ ಸಾಲಿನ ವಾರ್ಷಿಕ ವರದಿ

(01.04.2016 ರಿಂದ 31.03.2017 ರ ವರೆಗೆ

ಪರಿವಿಡಿ

ಕ್ರ.ಸಂ.	ವಿವರಗಳು	ಪುಟ ಸಂಖ್ಯೆ
1.	ಪ್ರಸ್ತಾವನೆ(Introdution)	1
2.	ಹೊಸಕೋಟೆ ಯೋಜನಾ ಪ್ರಾಧಿಕಾರದ ಕಾರ್ಯಾರಂಭದ ಬಗ್ಗೆ	1
3.	ಹೊಸಕೋಟೆ ಯೋಜನಾ ಪ್ರಾಧಿಕಾರದ ವ್ಯಾಪ್ತಿ	2
4.	ಪ್ರಾದೇಶಿಕ ನಕ್ಷೆ	4
5.	ಸ್ಥಳ ಸೂಚಿ ನಕ್ಷೆ ಹಾಗೂ ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶದ ನಕ್ಷೆ	5
6.	ಪ್ರಾಧಿಕಾರದ ಕಾರ್ಯ ಚಟುವಟಿಕೆಗಳು	6
7.	ಪ್ರಾಧಿಕಾರದ ಕಾರ್ಯ ವಿಧಾನ ಮತ್ತು ಕರ್ತವ್ಯಗಳು	6
8.	ಕರ್ತವ್ಯ ನಿರ್ವಹಣೆಗಾಗಿ ನಿಗಧಿ ಪಡಿಸಲಾದ ಸೂತ್ರಗಳು	7
9.	ಪ್ರಾಧಿಕಾರದಲ್ಲಿನ ನಿಯಮ/ಕಾಯ್ದೆಗಳು	7
10.	ಪ್ರಾಧಿಕಾರದ ಕಛೇರಿಯ ಅಧೀನದಲ್ಲಿ ಲಭ್ಯವಿರುವ ದಸ್ತಾವೇಜುಗಳು	7
11.	ಅಂತರ್‌ಜಾಲ (Website)	8
12.	ಸಾರ್ವಜನಿಕ ಮಾಹಿತಿಗಾಗಿ ಸೌಲಭ್ಯಗಳು:	8
13.	ಪ್ರಾಧಿಕಾರದ ಸಭೆಗಳು	11
14.	ಹೊಸಕೋಟೆ ಯೋಜನಾ ಪ್ರಾಧಿಕಾರದ ಕಛೇರಿಯ ಸಿಬ್ಬಂದಿ ವಿವರ	12
15.	ಪ್ರಾಧಿಕಾರದ ವಾಹನಗಳ ವಿವರ	13
16.	ಪ್ರಾಧಿಕಾರದ ಸ್ವಂತ ಕಛೇರಿ ಕಟ್ಟಡ ನಿರ್ಮಿಸಿರುವ ಬಗ್ಗೆ	13
17.	ಪ್ರಾಧಿಕಾರದ ಆಯವ್ಯಯ (Budget)	13
18.	ಪ್ರಾಧಿಕಾರದ ಆದಾಯ ಮತ್ತು ವೆಚ್ಚಗಳು	14
19.	ನಮೂನೆ -5	15
20.	ಅನುಬಂಧ-1	16-17
21.	ಅನುಬಂಧ-2	18-19

ಪ್ರಸ್ತಾವನೆ (Introdution):

ಹೊಸಕೋಟೆ ಯೋಜನಾ ಪ್ರಾಧಿಕಾರವು ರಾಜ್ಯ ಸರ್ಕಾರದ ಆಡಳಿತಕ್ಕೆ ಒಳಪಟ್ಟು ಕಾರ್ಯ ನಿರ್ವಹಿಸುವ ಸ್ವಾಯತ್ತ ಸಂಸ್ಥೆಗಳಲ್ಲಿ ಒಂದಾಗಿದ್ದು, ಈ ಪ್ರಾಧಿಕಾರದ ನೂತನ ಸ್ವಂತ ಕಛೇರಿ ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ -562114 ಇಲ್ಲಿ ಕಾರ್ಯನಿರ್ವಹಿಸುತ್ತಿದೆ. ಸರ್ಕಾರದಿಂದ ನೇಮಕಗೊಂಡ ಸ್ಥಳೀಯ ಪ್ರತಿನಿಧಿಗಳೊಬ್ಬರು ಕಛೇರಿಯ ಮುಖ್ಯಸ್ಥರಾಗಿ ಪ್ರಾಧಿಕಾರದ ಅಧ್ಯಕ್ಷತೆಯನ್ನು ವಹಿಸಿಕೊಳ್ಳುತ್ತಾರೆ. ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ನಿಯೋಜನೆಯ ಮೇಲೆ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾಗಿ ಪ್ರಾಧಿಕಾರದ ಕಾರ್ಯ ಚಟುವಟಿಕೆಗಳ ಸಂಬಂಧ ಕಾರ್ಯ ನಿರ್ವಹಣಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಾರೆ.

ಹೊಸಕೋಟೆ ಯೋಜನಾ ಪ್ರಾಧಿಕಾರದ ಕಾರ್ಯಾರಂಭದ ಬಗ್ಗೆ:

ಹೊಸಕೋಟೆ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶವು ಈ ಮೊದಲು ಸರ್ಕಾರದಿಂದ ಅನುಮೋದಿಸಿದ ರಚನಾ ನಕ್ಷೆ, 2021 ರಂತೆ APZ4 ಮತ್ತು IZ5, 6 ರಲ್ಲಿ ಬರುತ್ತಿದ್ದು, ಸದರಿ ಪ್ರದೇಶದಲ್ಲಿನ ಬೆಳವಣಿಗೆಗಳನ್ನು ನೇರವಾಗಿ ಬಿ.ಎಂ.ಆರ್.ಡಿ.ಎ. ಕಾಯ್ದೆಯಡಿಯಲ್ಲಿ ನಿಯಂತ್ರಿಸಲಾಗುತ್ತಿತ್ತು. ನಂತರದಲ್ಲಿ ಸರ್ಕಾರದಿಂದ ಅನುಮೋದಿತ ರಚನಾ ನಕ್ಷೆಯಂತೆ ಸದರಿ ಪ್ರದೇಶವನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶವಾಗಿ ಘೋಷಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4 (ಎ) ರನ್ವಯ ಸರ್ಕಾರದ ಆದೇಶ ಸಂ. ನಅಇ 118 ಬೆಂರೂಪ್ರಾ 2003, ದಿನಾಂಕ: 03.03.2006 ರಲ್ಲಿ ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 31 ಬೆಂರೂಪ್ರಾ 2006 ದಿನಾಂಕ: 19.07.2006 ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4 (ಸಿ) ರನ್ವಯ ಹೊಸಕೋಟೆ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿರುತ್ತದೆ.

ಅದರಂತೆ, ಮಹಾನಗರ ಆಯುಕ್ತರು, ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ಇವರನ್ನು ಅಧ್ಯಕ್ಷರನ್ನಾಗಿ ಹಾಗೂ ನಗರ ಯೋಜನಾ ಸಹಾಯಕ ನಿರ್ದೇಶಕರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಇವರನ್ನು ಸದಸ್ಯ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಲಾಗಿತ್ತು. ತದನಂತರ, ಸರ್ಕಾರದ ಆದೇಶ ಸಂ: ನಅಇ 83 ನಯೋಸೇ 2009, ಬೆಂಗಳೂರು, ದಿನಾಂಕ: 25.06.2009 ರಲ್ಲಿ ಪ್ರಾಧಿಕಾರದ ಸದಸ್ಯ-ಕಾರ್ಯದರ್ಶಿ ಹುದ್ದೆಯನ್ನು ನಗರ ಯೋಜನಾ ಜಂಟಿ ನಿರ್ದೇಶಕರ ಹುದ್ದೆಗೆ ಉನ್ನತೀಕರಿಸಿ ಆದೇಶಿಸಿ ನೇಮಿಸಲಾಗಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 66 ಬೆಂರೂಪ್ರಾ 2015, ದಿನಾಂಕ: 28.02.2015 ರಲ್ಲಿ ಅಧ್ಯಕ್ಷರನ್ನು ನಾಮ ನಿರ್ದೇಶನ ಮಾಡಿ ಆದೇಶಿಸಲಾಗಿದೆ. ಸದರಿ ಆದೇಶದನ್ವಯ ಅಧ್ಯಕ್ಷರ ಅಧಿಕಾರಾವಧಿಯನ್ನು 18 ತಿಂಗಳುಗಳಿಗೆ ಮಿತಿಗೊಳಿಸಿ ಆದೇಶಿಸಲಾಗಿದ್ದ ಹಿನ್ನೆಲೆಯಲ್ಲಿ ಸದರಿಯವರ ಅವಧಿಯು ದಿನಾಂಕ: 27.08.2016 ರಂದು ಅಂತ್ಯಗೊಂಡಿದ್ದು, ತದನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 152 ಬಿಎಂಆರ್ 2016, ದಿನಾಂಕ: 03.09.2016 ರಲ್ಲಿ ಮಾನ್ಯ ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರನ್ನು ಅಧ್ಯಕ್ಷರನ್ನಾಗಿ ಮುಂದಿನ ಆದೇಶದವರೆಗೆ ನೇಮಕ ಮಾಡಿ ಆದೇಶಿಸಲಾಗಿತ್ತು. ತದನಂತರ,

ಸರ್ಕಾರದ ಅಧಿಸೂಚನೆ ಸಂಖ್ಯೆ : ನಅಇ 192 ಬಿಎಂಆರ್ 2016, ದಿನಾಂಕ : 08.12.2016 ರಲ್ಲಿ ಅಧಿಕಾರೇತರ **ಅಧ್ಯಕ್ಷರನ್ನು** ಹೊಸಕೋಟೆ ಯೋಜನಾ ಪ್ರಾಧಿಕಾರಕ್ಕೆ ನಾಮ ನಿರ್ದೇಶನ ಮಾಡಿ ಆದೇಶಿಸಲಾಗಿರುತ್ತದೆ.

ಅದೇರೀತಿ, ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 26 ಬಿಎಂಆರ್ 2016, ದಿನಾಂಕ: 29.04.2016 ರಲ್ಲಿ ಇಬ್ಬರು ಸದಸ್ಯರುಗಳನ್ನು 15 ತಿಂಗಳುಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನಾಮ ನಿರ್ದೇಶನ ಮಾಡಿ ಆದೇಶಿಸಲಾಗಿರುತ್ತದೆ. ಸದರಿ ಆದೇಶವನ್ನು ಮಾರ್ಪಡಿಸಿದ ಅಧಿಸೂಚನೆ ಸಂಖ್ಯೆ: ನಅಇ 26 ಬಿಎಂಆರ್ 2016 (ಭಾ), ದಿನಾಂಕ: 24.01.2017ರಲ್ಲಿ ಒಬ್ಬ **ಸದಸ್ಯರನ್ನು** ಬದಲಾಯಿಸಲಾಗಿರುತ್ತದೆ.

ಶ್ರೀ ರಾಮಾಂಜಿನಿ ರವರು ಅಧ್ಯಕ್ಷರಾಗಿ ದಿನಾಂಕ: 09.03.2015 ರಿಂದ 27.08.2016 ರವರೆಗೆ ಕಾರ್ಯ ನಿರ್ವಹಿಸಿರುತ್ತಾರೆ.	
ಮಾನ್ಯ ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರು ಅಧ್ಯಕ್ಷರಾಗಿ ದಿನಾಂಕ: 03.09.2016 ರಿಂದ 15.12.2016 ರವರೆಗೆ ಕಾರ್ಯ ನಿರ್ವಹಿಸಿರುತ್ತಾರೆ.	ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿರುತ್ತಾರೆ.
ಶ್ರೀ ಕೃಷ್ಣರೆಡ್ಡಿ ರವರು ಅಧ್ಯಕ್ಷರಾಗಿ ದಿನಾಂಕ: 15.12.2016 ರಿಂದ ಕಾರ್ಯ ನಿರ್ವಹಿಸುತ್ತಿರುತ್ತಾರೆ.	ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು	ಸದಸ್ಯ ಕಾರ್ಯದರ್ಶಿಗಳು

ಹೊಸಕೋಟೆ ಯೋಜನಾ ಪ್ರಾಧಿಕಾರದ ವ್ಯಾಪ್ತಿ:


ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಕಸಬಾ ಹೋಬಳಿ, ಸೂಲಿಬೆಲೆ ಹೋಬಳಿ, ಅನುಗೊಂಡನಹಳ್ಳಿ ಹೋಬಳಿ, ನಂದಗುಡಿ ಹೋಬಳಿ ಮತ್ತು ಜಡಿಗೇನಹಳ್ಳಿ ಹೋಬಳಿಗಳಲ್ಲಿ (05 ಹೋಬಳಿಗಳ) ಬರುವಂತಹ ಸಂಪೂರ್ಣ ಗ್ರಾಮಗಳು ಹಾಗೂ ಬೆಂಗಳೂರು ನಗರ ಜಿಲ್ಲೆಯ ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ 16 ಗ್ರಾಮಗಳನ್ನು ಒಳಗೊಂಡಂತೆ (ಒಟ್ಟು 316 ಗ್ರಾಮಗಳು) ಕರ್ನಾಟಕ ಸರ್ಕಾರವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರನ್ವಯ ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಿದ್ದು, ಸದರಿ **ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣವು 591.72 ಚ.ಕಿ.ಮೀ. ಇರುತ್ತದೆ**. ಬೆಂಗಳೂರು ಮಹಾನಗರ ಪ್ರದೇಶದ ವ್ಯಾಪ್ತಿಯಲ್ಲಿನ 6 ಯೋಜನಾ ಪ್ರಾಧಿಕಾರಗಳಲ್ಲಿ ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶವು ಬೆಂಗಳೂರು ನಗರ ಜಿಲ್ಲೆಯ ಪೂರ್ವ ಭಾಗದಲ್ಲಿರುತ್ತದೆ ಹಾಗೂ ಕರ್ನಾಟಕ ರಾಜ್ಯದ ಆಗ್ನೇಯ ಭಾಗದಲ್ಲಿರುತ್ತದೆ. ಸದರಿ ಯೋಜನಾ ಪ್ರದೇಶದ ಉತ್ತರಕ್ಕೆ ಶಿಡ್ಲಘಟ್ಟ ತಾಲ್ಲೂಕು ಮತ್ತು ದೇವನಹಳ್ಳಿ ತಾಲ್ಲೂಕು, ಪೂರ್ವಕ್ಕೆ ಕೋಲಾರ ಮತ್ತು ಮಾಲೂರು ತಾಲ್ಲೂಕು, ದಕ್ಷಿಣಕ್ಕೆ ತಮಿಳುನಾಡು ರಾಜ್ಯದ ಎಲ್ಲೆಯವರೆಗೆ ವಿಸ್ತರಿಸಿರುತ್ತದೆ. ಹಾಗೂ ಪಶ್ಚಿಮಕ್ಕೆ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನಾ ಪ್ರಾಧಿಕಾರದ ವ್ಯಾಪ್ತಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿ ಇರುತ್ತದೆ. ಹೊಸಕೋಟೆ ಪಟ್ಟಣವು ಬೆಂಗಳೂರಿನಿಂದ 27 ಕಿ.ಮೀ. ದೂರದಲ್ಲಿದ್ದು, ಹೊಸಕೋಟೆ ಸ್ಥಳೀಯ ಯೋಜನಾ

ಪ್ರದೇಶದಲ್ಲಿ ಮುಖ್ಯವಾಗಿ ರಾಷ್ಟ್ರೀಯ ಹೆದ್ದಾರಿ NH–4 ಮತ್ತು NH–207 ಹಾಗೂ ರಾಜ್ಯ ಹೆದ್ದಾರಿಗಳಾದ SH-35, SH-82, SH-95 ಮತ್ತು SH-96 ರಸ್ತೆಗಳು ಹಾದು ಹೋಗುತ್ತವೆ. ಸದರಿ ಸ್ಥಳೀಯ ಯೋಜನಾ ಪ್ರದೇಶವು ಉತ್ತಮ ಪ್ರಾದೇಶಿಕ ರಸ್ತೆ ಸಂಪರ್ಕವನ್ನು ಹಾಗೂ ರೈಲು ಮಾರ್ಗವನ್ನು ಹೊಂದಿರುತ್ತದೆ.


ಆದರೆ, ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 36 ಬಿ.ಎಂ.ಆರ್ 2016, ಬೆಂಗಳೂರು, ದಿನಾಂಕ: 24.06.2016 ರಲ್ಲಿ **"ಉಪನಗರ ವರ್ತುಲ ರಸ್ತೆ (STRR) ಸ್ಥಳೀಯ ಯೋಜನಾ ಪ್ರದೇಶ"** ವನ್ನು ಘೋಷಿಸಲಾಗಿರುತ್ತದೆ. ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಹಾಲಿ 316 ಗ್ರಾಮ ಮತ್ತು ಹೊಸಕೋಟೆ ನಗರಸಭೆ ಪ್ರದೇಶವು ಒಳಗೊಂಡಂತೆ ಒಟ್ಟು 59172 ಹೆಕ್ಟೇರ್ ಅಥವಾ 591.72 ಚ.ಕಿ.ಮೀ. ಪ್ರದೇಶವಿದ್ದು, ಅದರಲ್ಲಿ **STRR** ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡುವ 51 ಗ್ರಾಮಗಳ ಒಟ್ಟು 11624 ಹೆಕ್ಟೇರ್ ಅಥವಾ 116.24 ಚ.ಕಿ.ಮೀ. ವಿಸ್ತೀರ್ಣವನ್ನು (51 ಗ್ರಾಮಗಳ ಪಟ್ಟಿಯನ್ನು ಅನುಬಂಧ–1 ರಲ್ಲಿ ನಮೂದಿಸಿದೆ) ಹಿಂತೆಗೆದುಕೊಳ್ಳಲಾಗಿರುತ್ತದೆ.

ಈ ಮೊದಲಿದ್ದ ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣ 591.72 ಚ.ಕಿ.ಮೀ. ನಲ್ಲಿ ಉಪನಗರ ವರ್ತುಲ ರಸ್ತೆ **(STRR)** ಸ್ಥಳೀಯ ಯೋಜನಾ ಪ್ರದೇಶಕ್ಕಾಗಿ ಹಿಂತೆಗೆದುಕೊಳ್ಳಲಾದ 51 ಗ್ರಾಮಗಳ 116.24 ಚ.ಕಿ.ಮೀ. ವಿಸ್ತೀರ್ಣವನ್ನು ಹೊರತುಪಡಿಸಿ ಉಳಿದ 475.48 ಚ.ಕಿ.ಮೀ. ವಿಸ್ತೀರ್ಣವು (ಹೊಸಕೋಟೆ ನಗರಸಭೆ ಹಾಗೂ ತಾಲ್ಲೂಕಿನ 249 ಗ್ರಾಮಗಳು ಮತ್ತು ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ 16 ಗ್ರಾಮಗಳು ಸೇರಿದಂತೆ ಒಟ್ಟಾರೆ 265 ಗ್ರಾಮಗಳು) ಹಾಲಿ ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣವಾಗಿರುತ್ತದೆ.

ಪ್ರಾದೇಶಿಕ ನಕ್ಷೆ


CHITRADURGA DISTRICT
ANDHRA PRADESH STATE
ANDHRA PRADESH STATE
CHIKMAGALUR DISTRICT
HASSAN DISTRICT
MANDYA DISTRICT
TAMIL NADU STATE
ANDHRA PRADESH STATE


ಸ್ಥಳ ಸೂಚಿ ನಕ್ಷೆ



BMR LOCAL PLANNING AREAS

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶ ವ್ಯಾಪ್ತಿಯಲ್ಲಿನ ಯೋಜನಾ ಪ್ರಾಧಿಕಾರಗಳು

ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶದ ನಕ್ಷೆ



ಪ್ರಾಧಿಕಾರದ ಕಾರ್ಯ ಚಟುವಟಿಕೆಗಳು:

1. ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾ ಯೋಜನೆ ತಯಾರಿಕೆ: ಯೋಜನಾ ಪ್ರಾಧಿಕಾರದ ವ್ಯಾಪ್ತಿಯೊಳಗೆ ಬರುವ ಪಟ್ಟಣ ಮತ್ತು ಅಭಿವೃದ್ಧಿ ಪಥದಲ್ಲಿ ಇರುವ ಗ್ರಾಮಗಳ ಭೌತಿಕ, ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ ನಡೆಸಿ ಮಹಾ ಯೋಜನೆಯನ್ನು ಸಿದ್ಧಪಡಿಸುವುದು ಮತ್ತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರಂತೆ ಈ ಮಹಾ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯುವುದು ಹಾಗೂ ಅನುಷ್ಠಾನಗೊಳಿಸುವುದು. ಅಲ್ಲದೆ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯೊಳಗೆ ಬರುವ ಹಳ್ಳಿಗಳಿಗೆ ಅಭಿವೃದ್ಧಿ ನಕ್ಷೆ ತಯಾರಿಸುವುದು.
2. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿಯಲ್ಲಿ ಸಂಬಂಧಿಸಿದ ಇಲಾಖೆ ಮತ್ತು ಸಂಸ್ಥೆಗಳಿಗೆ ತಾಂತ್ರಿಕ ನೆರವು ಮತ್ತು ಅಭಿಪ್ರಾಯ ನೀಡುವುದು.
3. ವ್ಯವಸಾಯ ಭೂಮಿಯನ್ನು ವ್ಯವಸಾಯೇತರ ಉದ್ದೇಶಗಳಿಗಾಗಿ ಭೂ ಪರಿವರ್ತನೆ ಮಾಡುವ ಬಗ್ಗೆ ಕಂದಾಯ ಇಲಾಖೆಗೆ ತಾಂತ್ರಿಕ ಅಭಿಪ್ರಾಯ ನೀಡುವುದು.
4. ಭೂ ಪರಿವರ್ತನೆ ಆಗಿರುವ ಜಮೀನುಗಳಿಗೆ ವಸತಿ, ವಾಣಿಜ್ಯ, ಕೈಗಾರಿಕಾ ಮತ್ತು ಇತರೆ ಉದ್ದೇಶದ ವಿನ್ಯಾಸ ಅನುಮೋದನೆ ಮತ್ತು ಅಭಿವೃದ್ಧಿ ನಕ್ಷೆಗೆ ಅನುಮೋದನೆ ನೀಡುವುದು ಮತ್ತು ಕಟ್ಟಡವನ್ನು ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡುವುದು ಹಾಗೂ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ ಸ್ಥಳೀಯ ಸಂಸ್ಥೆಗಳಿಗೆ ತಾಂತ್ರಿಕ ಅಭಿಪ್ರಾಯ ನೀಡುವುದು.
5. ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಭೂ ಉಪಯೋಗಗಳನ್ನು ಹಾಗೂ ಬೆಳವಣಿಗೆಗಳನ್ನು ನಿಯಂತ್ರಿಸುವ ಸಂಬಂಧ ಸದರಿ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಧ್ಯಂತರ ಮಹಾ ಯೋಜನೆಯನ್ನು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ತಯಾರಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಿದ್ದು, ಸದರಿ ಮಧ್ಯಂತರ ಮಹಾಯೋಜನೆಗೆ ದಿನಾಂಕ: 28.05.2009 ರಂದು ಸರ್ಕಾರದ ಅನುಮೋದನೆಯಾಗಿರುತ್ತದೆ. ಸದರಿ ಅನುಮೋದಿತ ಮಧ್ಯಂತರ ಮಹಾ ಯೋಜನೆಯ ವಲಯ ನಿಯಮಾವಳಿಗಳಿಗನುಗುಣವಾಗಿ ಅಭಿವೃದ್ಧಿಗಳನ್ನು ನಿಯಂತ್ರಿಸಲಾಗುತ್ತಿದೆ. ಸದರಿ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸಿದ್ಧಪಡಿಸಲಾಗಿದ್ದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 152 ಬಿಎಂಆರ್ 2013, ದಿನಾಂಕ: 16.09.2013 ರಲ್ಲಿ ತಾತ್ಕಾಲಿಕ ಅನುಮೋದನೆ ನೀಡಲಾಗಿರುತ್ತದೆ.

ಪ್ರಾಧಿಕಾರದ ಕಾರ್ಯ ವಿಧಾನ ಮತ್ತು ಕರ್ತವ್ಯಗಳು:

ಕ್ರ.ಸಂ	ಅಧ್ಯಕ್ಷರು	ಸದಸ್ಯ-ಕಾರ್ಯದರ್ಶಿ	ಸದಸ್ಯರು
1.	ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮ, 1965 ರನ್ವಯ ಪ್ರಾಧಿಕಾರದ ಸಭೆಯನ್ನು ಏರ್ಪಡಿಸುವುದು.	ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ-4(ಹೆಚ್) ರಂತೆ ಹಾಗೂ ಸಭೆಯ ನಿರ್ಣಯದಂತೆ ಕೆಲಸ ನಿರ್ವಹಿಸುವುದು ಮತ್ತು ಸಂಸ್ಥೆಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿ ಕಾರ್ಯ ನಿರ್ವಹಿಸುವುದು.	ಪ್ರಾಧಿಕಾರದ ಸಭೆಯಲ್ಲಿ ಭಾಗವಹಿಸಿ ನಿರ್ಣಯ ಕೈಗೊಳ್ಳುವಲ್ಲಿ ಸಲಹೆ ನೀಡುವುದು.

ಕರ್ತವ್ಯ ನಿರ್ವಹಣೆಗಾಗಿ ನಿಗಧಿ ಪಡಿಸಲಾದ ಸೂತ್ರಗಳು:

ಪ್ರಾಧಿಕಾರದ ಕಾರ್ಯನಿರ್ವಹಣೆಯು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಮತ್ತು ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳ ಇತರೆ ಕಾಯ್ದೆಗಳಡಿಯಲ್ಲಿನ ಅವಕಾಶದಂತೆ ಹಾಗೂ ಸರ್ಕಾರದಿಂದ ಜಾರಿಗೊಳಿಸಲಾದ ಆದೇಶಗಳು, ಸುತ್ತೋಲೆಗಳು ಮತ್ತು ಪ್ರಾಧಿಕಾರದ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಅನುಸರಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.

ಪ್ರಾಧಿಕಾರದಲ್ಲಿ ಈ ಕೆಳಕಂಡ ನಿಯಮ/ಕಾಯ್ದೆಗಳನ್ನು ಪರಿಗಣಿಸಿ ಕಾರ್ಯ ನಿರ್ವಹಿಸಲಾಗುತ್ತಿದೆ.

a. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961.

b. ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮಗಳು, 1965.

c. ಕರ್ನಾಟಕ ಮುನಿಸಿಪಾಲಿಟೀಸ್ ಕಾಯ್ದೆ, 1964.

d. ಕರ್ನಾಟಕ ಸಿನಿಮಾ (Regulations)ಕಾಯ್ದೆ, 1964.

e.ರಾಷ್ಟ್ರೀಯ ಹೆದ್ದಾರಿ ಕಾಯ್ದೆ, 1956.

f. ಕರ್ನಾಟಕ ಹೆದ್ದಾರಿ ಅಧಿನಿಯಮ, 1964.

g. ಕರ್ನಾಟಕ ಸ್ಲಂ ಏರಿಯಾ ಕಾಯ್ದೆ, 1973.

h. ಕರ್ನಾಟಕ ಇಂಡಸ್ಟ್ರೀಯಲ್ ಏರಿಯಾ ಡೆವಲಪ್‌ಮೆಂಟ್ ಕಾಯ್ದೆ, 1966.

i. ಕರ್ನಾಟಕ ಗೃಹ ಮಂಡಳಿ (K.H.B)ಕಾಯ್ದೆ, 1962.

j.ಕೆ.ಸಿ.ಎಸ್.ಆರ್., 1957.

ಪ್ರಾಧಿಕಾರದ ಕಛೇರಿಯ ಅಧೀನದಲ್ಲಿ ಲಭ್ಯವಿರುವ ದಸ್ತಾವೇಜುಗಳು:

1. ಅನುಮೋದಿತ ಮಧ್ಯಂತರ ಮಹಾ ಯೋಜನೆಯ (Interim Master Plan)ನಕ್ಷೆಗಳು ಹಾಗೂ ವರದಿ.
2. ಅನುಮೋದಿತ ಮಹಾಯೋಜನೆಯ (ತಾತ್ಕಾಲಿಕ) (Provisional Master Plan)ನಕ್ಷೆಗಳು ಹಾಗೂ ವರದಿ.
3. ಅನುಮೋದಿತ ವಿನ್ಯಾಸ ನಕ್ಷೆಗಳು.
4. ಭೂ ಪರಿವರ್ತನೆ ಮಾಡುವ ಬಗ್ಗೆ ಕಂದಾಯ ಇಲಾಖೆಗೆ ಅಭಿಪ್ರಾಯ ನೀಡಲಾದ ಕಡತಗಳು.
5. ಕಟ್ಟಡ ಕಟ್ಟಲು ನೀಡಲಾದ ಪ್ರಾರಂಭಿಕ ಪ್ರಮಾಣ ಪತ್ರಗಳ ಕಡತಗಳು ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಕಟ್ಟಡ ಕಟ್ಟುವ ಸಂಬಂಧ ನೀಡಲಾದ ತಾಂತ್ರಿಕ ಅಭಿಪ್ರಾಯದ ಕಡತಗಳು.
6. ಭೂ ಉಪಯೋಗ ಬದಲಾವಣೆಗೆ ನೀಡಿರುವ ಕಡತಗಳು.
7. ಆಯವ್ಯಯ, ನಗದು ಪುಸ್ತಕಗಳು ಮತ್ತು ಆಸ್ತಿ ವಹಿ ದಾಸ್ತಾವೇಜು.
8. ದಾಸ್ತಾನು ಪುಸ್ತಕ.

ಮಾಹಿತಿ ಹಕ್ಕು ಅಧಿನಿಯಮ, 2005 ಮತ್ತು ನಿಯಮಗಳ ಅಡಿಯಲ್ಲಿ ಪ್ರಾಧಿಕಾರದಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಹಾಗೂ ಸಾರ್ವಜನಿಕ ಮಾಹಿತಿ ಕುರಿತಂತೆ ಈ ಕೆಳಗಿನ ಪ್ರಾಧಿಕಾರಗಳನ್ನು ಸಂಪರ್ಕಿಸಬಹುದಾಗಿರುತ್ತದೆ.

1. ಸಕ್ಷಮ ಪ್ರಾಧಿಕಾರ – ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.
2. ಅಪೀಲು ಪ್ರಾಧಿಕಾರ – ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

3. ಮೇಲ್ಮನವಿ ಪ್ರಾಧಿಕಾರ –ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಅಂತರ್‌ಜಾಲ (Website):

ಹೊಸಕೋಟೆ ಯೋಜನಾ ಪ್ರಾಧಿಕಾರದ ಮಾಹಿತಿಯು ಅಂತರ್‌ಜಾಲ (Website)**www.hoskote-pa.in** ದಲ್ಲಿ ಲಭ್ಯವಿರುತ್ತದೆ. ಇದರಲ್ಲಿ ಹೊಸಕೋಟೆ ಯೋಜನಾ ಪ್ರಾಧಿಕಾರದ ಸಾರ್ವಜನಿಕವಾಗಿ ಅವಶ್ಯಕವಾದ ಮಾಹಿತಿ ಲಭ್ಯವಿರುತ್ತದೆ ಮತ್ತು ವಿವರಗಳು ಪಾರದರ್ಶಕವಾಗಿ ಸಿಗುವಂತೆ ಮಾಡಲಾಗಿದೆ.

ಸಾರ್ವಜನಿಕ ಮಾಹಿತಿಗಾಗಿ ಸೌಲಭ್ಯಗಳು:

ಹೊಸಕೋಟೆ ಯೋಜನಾ ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ ಪ್ರಮುಖ ವಿಷಯಗಳ ಕುರಿತು ಪ್ರಕಟಣೆಗಳನ್ನು ಹಾಗೂ ಮಾಹಿತಿಗಳನ್ನು ಪ್ರಾಧಿಕಾರದ ಕಛೇರಿಯ ಸೂಚನಾ ಫಲಕದಲ್ಲಿ ಸಾರ್ವಜನಿಕರ ಗಮನಕ್ಕೆ ತರಲಾಗುತ್ತಿದೆ.

1. **ಭೂ ಪರಿವರ್ತನೆ:** ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಬರುವ ಜಮೀನುಗಳಿಗೆ ಭೂ ಪರಿವರ್ತನೆಗಾಗಿ ತಾಂತ್ರಿಕ ಅಭಿಪ್ರಾಯ ನೀಡಲು, ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗುತ್ತಿದ್ದು, ಸದರಿ ಪ್ರಕರಣಗಳನ್ನು ಸರ್ಕಾರದಿಂದ ಅನುಮೋದನೆಯಾದ ಮಧ್ಯಂತರ ಮಹಾ ಯೋಜನೆ (**Interim Master Plan**)ಯ ಭೂ ಉಪಯೋಗ ಹಾಗೂ ವಲಯನಿಯಮಾವಳಿಗಳಂತೆ ಪರಿಶೀಲಿಸಿ ತಾಂತ್ರಿಕ ಅಭಿಪ್ರಾಯವನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗುತ್ತಿದೆ. ಪ್ರಸ್ತುತ ಸಾಲಿನಲ್ಲಿ ಕಂದಾಯ ಇಲಾಖೆಯಿಂದ ಈ ಪ್ರಾಧಿಕಾರಕ್ಕೆ ವ್ಯವಸಾಯ ಜಮೀನುಗಳನ್ನು ವ್ಯವಸಾಯೇತರ ಉದ್ದೇಶಗಳಿಗೆ ಭೂ ಪರಿವರ್ತನೆ ಮಾಡುವ ಬಗ್ಗೆ **ಪರಿಗಣಿಸಲು 177** ಪ್ರಕರಣಗಳಲ್ಲಿ ತಾಂತ್ರಿಕ ಅಭಿಪ್ರಾಯ ನೀಡಲಾಗಿದೆ. ಉಳಿದ **59** ಪ್ರಕರಣಗಳಲ್ಲಿ ಪ್ರಸ್ತಾವನೆಯನ್ನು ತಿರಸ್ಕರಿಸಲು ತಾಂತ್ರಿಕ ಅಭಿಪ್ರಾಯ ನೀಡಲಾಗಿದೆ. ಅಂದರೆ, ಒಟ್ಟಾರೆಯಾಗಿ 2016–17 ನೇ ಸಾಲಿನಲ್ಲಿ **236** ಪ್ರಕರಣಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಅಭಿಪ್ರಾಯ ನೀಡಲಾಗಿದೆ.

2. **ವಿನ್ಯಾಸ ಅನುಮೋದನೆ** :ಪ್ರಾಧಿಕಾರದಿಂದ ಭೂ ಪರಿವರ್ತನೆಗೆ ಅಭಿಪ್ರಾಯ ನೀಡಿದ ನಂತರ ಜಿಲ್ಲಾಧಿಕಾರಿಗಳು ಭೂ ಪರಿವರ್ತನೆಗೊಳಿಸಿದ ಆದೇಶವನ್ನು ಜಾರಿಗೊಳಿಸುತ್ತಾರೆ. ತದನಂತರ, ಭೂ ಪರಿವರ್ತನಾ ಆದೇಶದ ಜೊತೆಗೆ ಅರ್ಜಿದಾರರು ಪ್ರಾಧಿಕಾರಕ್ಕೆ ವಿನ್ಯಾಸ ಅನುಮೋದನೆ ಕೋರಿ ಅರ್ಜಿ ಸಲ್ಲಿಸುತ್ತಾರೆ. ಈ ರೀತಿ ಸ್ವೀಕೃತಿಗೊಂಡ ಅರ್ಜಿಗಳನ್ನು ನಿಯಮಾವಳಿಗಳನ್ವಯ ಪ್ರಾಧಿಕಾರದಲ್ಲಿ ತಾಂತ್ರಿಕವಾಗಿ ಪರಿಶೀಲಿಸಿದ ನಂತರ ಪ್ರಾಧಿಕಾರದ ಸಭೆಯಲ್ಲಿ ವಿಷಯವನ್ನು ಮಂಡಿಸಿ, ಸಭೆಯ ಆಡಳಿತಾತ್ಮಕ ಅನುಮೋದನೆ ಪಡೆದು ಈ ಕೆಳಕಂಡಂತೆ ವಿನ್ಯಾಸ ನಕ್ಷೆಗಳನ್ನು ಅನುಮೋದಿಸಲಾಗುತ್ತಿದೆ.

ಅ) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 17 ರಂತೆ ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ: ನ.ಅ.ಇ.112 ಬೆರೂಪ್ರಾ 2005 ದಿನಾಂಕ: 26.05.2005 ರ ಮಾರ್ಗಸೂಚಿಯಂತೆ ವಿನ್ಯಾಸವನ್ನು ಅನುಮೋದಿಸಿ ಶೇ. 60 ರಷ್ಟು

ನಿವೇಶನಗಳನ್ನು ಬಿಡುಗಡೆಗೊಳಿಸಲಾಗುತ್ತಿತ್ತು. ನಂತರ ಅನುಮೋದನೆ ಪಡೆದ ವಿನ್ಯಾಸದಂತೆ ಅರ್ಜಿದಾರರು ಎಲ್ಲಾ ವಿಧದಲ್ಲಿಯೂ ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಗೊಳಿಸಿದ ನಂತರ ಸಂಬಂಧಿಸಿದ ಇಲಾಖೆಗಳಿಂದ ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಗೊಳಿಸಿರುವ ಬಗ್ಗೆ ಪ್ರಮಾಣ ಪತ್ರಗಳನ್ನು ಪ್ರಾಧಿಕಾರಕ್ಕೆ ಹಾಜರು ಪಡಿಸಿ ವಿನ್ಯಾಸದಲ್ಲಿನ ಉಳಿದ ಶೇ. 40 ರಷ್ಟು ನಿವೇಶನಗಳ ಬಿಡುಗಡೆಗಾಗಿ ಕೋರಿ ಅರ್ಜಿ ಸಲ್ಲಿಸುತ್ತಾರೆ. ನಂತರ ಪ್ರಾಧಿಕಾರದಿಂದ ಸದರಿ ವಿನ್ಯಾಸವನ್ನು ಅನುಮೋದಿತ ನಕ್ಷೆಯಂತೆ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಗೊಳಿಸಿದ ಬಗ್ಗೆ ಪರಿವೀಕ್ಷಣೆ ಕೈಗೊಂಡು ಖಚಿತ ಪಡಿಸಿಕೊಂಡ ನಂತರ ಉಳಿದ ಶೇ. 40 ರಷ್ಟು ನಿವೇಶನಗಳನ್ನು ಪ್ರಾಧಿಕಾರದ ವತಿಯಿಂದ ಬಿಡುಗಡೆಗೊಳಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿತ್ತು.

ಆ) ವಿನ್ಯಾಸ ಅನುಮೋದನೆ ಆದೇಶವನ್ನು ಮಾರ್ಪಡಿಸಿ ಹೊರಡಿಸಲಾದ ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 599 ಮೈಅಪ್ರಾ 2012, ದಿನಾಂಕ: 03.12.2012 ರನ್ವಯ ಸಭೆಯ ಆಡಳಿತಾತ್ಮಕ ಅನುಮೋದನೆ ಪಡೆದು ವಿನ್ಯಾಸ ನಕ್ಷೆಯಲ್ಲಿನ ಮೊದಲನೇ ಹಂತವಾಗಿ ಶೇ. 40 ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಿ ನಂತರ ಎರಡನೇ ಹಂತದಲ್ಲಿ ಶೇ. 30 ಹಾಗೂ ಮೂರನೇ ಹಂತದಲ್ಲಿ ಶೇ. 30 ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿತ್ತು. ಈ ರೀತಿ ವಿನ್ಯಾಸಗಳನ್ನು (ಶೇ.40:30:30) ಅನುಮೋದಿಸಲಾಗುತ್ತಿತ್ತು.

ಇ) ಪ್ರಸ್ತುತ ಕರ್ನಾಟಕ ರಾಜ್ಯ ಪತ್ರದಲ್ಲಿ ವಿನ್ಯಾಸ ಅನುಮೋದನೆ ಆದೇಶವನ್ನು ಮಾರ್ಪಡಿಸಿ ಪ್ರಕಟಿಸಲಾದ ಪ್ರಕಟಣೆ ಸಂಖ್ಯೆ: ಸಂವ್ಯಶಾಇ 24 ಶಾಸನ 2015, ಬೆಂಗಳೂರು, ದಿನಾಂಕ: 10.09.2015 ರನ್ವಯ 2015-16 ನೇ ಸಾಲಿನಲ್ಲಿ ವಸತಿ ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸುವ ಸಂಬಂಧ ಹಾಗೂ ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸಲಾದ ನಂತರ ವಿವಿಧ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸುವ ನಿಬಂಧನೆಗೊಳಪಟ್ಟು 05 ವಸತಿ ವಿನ್ಯಾಸಕ್ಕೆ ತಾತ್ಕಾಲಿಕ ಅನುಮೋದನೆ ನೀಡಲಾಗಿದ್ದು, ಸದರಿ ತಾತ್ಕಾಲಿಕ ಅನುಮೋದನೆ ನೀಡಲಾದ ವಿನ್ಯಾಸಗಳ ಪೈಕಿ 01 ವಸತಿ ವಿನ್ಯಾಸದಲ್ಲಿನ ಎಲ್ಲಾ ಅಬಿವೃದ್ಧಿ ಕಾಮಗಾರಿಗಳು ಹಾಗೂ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿದ ಹಿನ್ನೆಲೆಯಲ್ಲಿ ಅರ್ಜಿದಾರರ ಕೋರಿಕೆಯಂತೆ ಹಾಗೂ ಅಗತ್ಯ ನಿರಾಕ್ಷೇಪಣಾ ಪತ್ರಗಳನ್ನು ಪಡೆದು ಶೇ 100 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

3) **ಇ-ವಿನ್ಯಾಸ**: ರಾಜ್ಯದ ಘನ ಉಚ್ಚ ನ್ಯಾಯಾಲಯವು ದಾಖಲಿಸಿರುವ ರಿಟ್ ಅರ್ಜಿ ಸಂಖ್ಯೆ: 12278/2007 ರ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಆದೇಶದಂತೆ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಹಾಗೂ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಸ್ಥಳೀಯ ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿ ಹಿಂದೆ ಅನುಮೋದನೆಯಾದ ವಸತಿ ವಿನ್ಯಾಸಗಳನ್ನು ಇ-ವಿನ್ಯಾಸ ತಂತ್ರಾಂಶವನ್ನು ಉಪಯೋಗಿಸಿ (ಕಾವೇರಿ ತಂತ್ರಾಂಶ) ವಿನ್ಯಾಸಗಳನ್ನು ಅನುಮೋದಿಸುವ ಸಂಬಂಧ ದಿನಾಂಕ: 08.10.2013 ರ ವರೆಗೆ ಅನುಮೋದಿಸಲಾಗಿರುವ ವಿನ್ಯಾಸಗಳನ್ನು ಇ-ತಂತ್ರಾಶದ ಅಡಿಯಲ್ಲಿ ಅಪ್‌ಲೋಡ್ ಮಾಡಲಾಗಿದ್ದು, ತದನಂತರ ಹೊಸದಾಗಿ ಅನುಮೋದಿಸಲಾಗುತ್ತಿರುವ ವಿನ್ಯಾಸಗಳನ್ನು ನೇರವಾಗಿ ಇ-ವಿನ್ಯಾಸ ತಂತ್ರಾಂಶವನ್ನು ಉಪಯೋಗಿಸಿ ವಿನ್ಯಾಸಗಳನ್ನು ಅನುಮೋದಿಸಲಾಗುತ್ತಿದ್ದು, ನಂತರ ನಿವೇಶನಗಳನ್ನು ಬಿಡುಗಡೆ ಮಾಡಲಾಗುತ್ತಿದೆ.

4) **ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ** : ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಕಟ್ಟಲು ಉದ್ದೇಶಿಸಲಾದಂತಹ ಕಟ್ಟಡಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 15 ರಂತೆ ಪ್ರಾರಂಭಿಕ ಪ್ರಮಾಣ ಪತ್ರಕ್ಕಾಗಿ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಂದ ಬಂದ ಅರ್ಜಿಗಳನ್ನು ಅನುಮೋದಿತ ವಲಯ ನಿಯಮಾವಳಿಯಂತೆ ಪರಿಶೀಲಿಸಿದ ನಂತರ ಪ್ರಾಧಿಕಾರದಿಂದ ನೀಡಬೇಕಾದ ಉದ್ದೇಶಿತ ಕಟ್ಟಡಗಳಿಗೆ ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರ ನೀಡಿ ಮುಂದಿನ ಕ್ರಮಕ್ಕಾಗಿ ಪರವಾನಿಗೆ ನೀಡಲು ಕಡತಗಳನ್ನು ಸ್ಥಳೀಯ ಸಂಸ್ಥೆಗೆ ಕಳುಹಿಸಲಾಗುವುದು ಮತ್ತು ಸ್ಥಳೀಯ ಸಂಸ್ಥೆಯೇ ಪ್ರಾರಂಭಿಕ ಪ್ರಮಾಣ ಪತ್ರ ನೀಡಬೇಕಾದ ಪ್ರಕರಣಗಳನ್ನು ತಾಂತ್ರಿಕವಾಗಿ ಪರಿಶೀಲಿಸಿ ಪ್ರಾಧಿಕಾರದ ಅಭಿಪ್ರಾಯದೊಂದಿಗೆ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ಪ್ರಸ್ತಾವನೆಗಳನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಅದರಂತೆ, 2016-17 ನೇ ಸಾಲಿನಲ್ಲಿ ಒಟ್ಟು **66** ಪ್ರಕರಣಗಳನ್ನು ಸ್ವೀಕರಿಸಲಾಗಿದ್ದು, ಅವುಗಳಲ್ಲಿ 60 ಪ್ರಕರಣಗಳಿಗೆ ತಾಂತ್ರಿಕ ಅನುಮೋದನೆ / ಪ್ರಾರಂಭಿಕ ಪ್ರಮಾಣ ಪತ್ರಗಳನ್ನು ನೀಡಲಾಗಿದ್ದು, ಉಳಿದ **06** ಪ್ರಕರಣಗಳಿಗೆ ಸಂಬಂಧಿಸಿದಂತೆ ಕೆಲವೊಂದು ದಾಖಲಾತಿಗಳನ್ನು ಸಲ್ಲಿಸಲು ತಿಳಿಸಿ ಹಿಂಬರಹ ನೀಡಲಾಗಿದ್ದು ಹಾಗೂ ಕೆಲವೊಂದು ಪ್ರಕರಣಗಳಲ್ಲಿ ತಿರಸ್ಕರಿಸಿ ಅಭಿಪ್ರಾಯ ನೀಡಲಾಗಿದೆ.

5) **ಮಹಾ ಯೋಜನೆ (Master Plan):** ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾ ಯೋಜನೆಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿದ್ದು, ಈ ಯೋಜನೆಗೆ ದಿನಾಂಕ: 16.09.2013 ರಂದು ಸರ್ಕಾರದ ಪತ್ರ ಸಂಖ್ಯೆ: ನಅಇ 152 ಬಿಎಂಆರ್ 2013 ರಲ್ಲಿ ಮಹಾ ಯೋಜನೆಗೆ ತಾತ್ಕಾಲಿಕ ಅನುಮೋದನೆಯನ್ನು ನೀಡಲಾಗಿರುತ್ತದೆ. ಸದರಿ ತಾತ್ಕಾಲಿಕ ಮಹಾ ಯೋಜನೆಗೆ ಸಂಬಂಧಿಸಿದಂತೆ ದಿನಾಂಕ: 09.10.2013 ರಿಂದ 07.12.2013 ರವರೆಗೆ ಸಾರ್ವಜನಿಕರಿಂದ ಸಲಹೆ/ ಸೂಚನೆ/ ಆಕ್ಷೇಪಣೆಗಳನ್ನು ಆಹ್ವಾನಿಸಿ ಅವುಗಳನ್ನು ಸ್ವೀಕರಿಸಲಾಗಿರುತ್ತದೆ. ಸದರಿ ಸಾರ್ವಜನಿಕರಿಂದ ಸ್ವೀಕರಿಸಲಾದ ಸಲಹೆ/ ಸೂಚನೆ/ ಆಕ್ಷೇಪಣೆಗಳನ್ನು ಪರಿಶೀಲಿಸುವ ಸಂಬಂಧ ಸರ್ಕಾರದ ಆದೇಶ ಸಂಖ್ಯೆ: ನಅಇ 27 ಬಿಎಂಆರ್ 2014, ದಿನಾಂಕ: 05.03.2014 ರನ್ವಯ ರಚಿತವಾದ ಅಧಿಕಾರಿಗಳ ಸಮಿತಿಯಿಂದ ಪರಿಶೀಲಿಸಲು ಸಭೆಗಳನ್ನು ನಡೆಸಲಾಗಿದ್ದು, ಬೆಂಗಳೂರು-ಚೆನ್ನೈ ಎಕ್ಸ್‌ಪ್ರೆಸ್ ಹೈ-ವೇ, ಮಂಡೂರು ಘನತ್ಯಾಜ್ಯ ವಿಲೇವಾರಿ ಘಟಕ ಹಾಗೂ ಇತರೆ ಕ್ಲಿಷ್ಟ ಆಕ್ಷೇಪಣೆಗಳನ್ನು ಪರಿಶೀಲಿಸಿ ತೀರ್ಮಾನ ಕೈಗೊಳ್ಳಲು ಸಮಿತಿಗೆ ಸಾಧ್ಯವಾಗದೇ ಇರುವುದರಿಂದ ಮತ್ತೊಮ್ಮೆ ಸಮಿತಿಯ ಸಭೆಗಳನ್ನು ಕರೆದು ಚರ್ಚಿಸಿ ತೀರ್ಮಾನ ಕೈಗೊಳ್ಳಲು ಅಧ್ಯಕ್ಷರು ತೀರ್ಮಾನಿಸಿರುತ್ತಾರೆ. ಅದರಂತೆ ಮತ್ತೊಮ್ಮೆ ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಸಭೆಗಳನ್ನು ಕರೆಯಲು ಕ್ರಮ ಕೈಗೊಳ್ಳಲಾಗುತ್ತಿತ್ತು.

ಈ ಮಧ್ಯೆ ಸರ್ಕಾರದ ಆದೇಶ ಸಂಖ್ಯೆ: ನಅಇ 152 ಬಿಎಂಆರ್ 2013, ಬೆಂಗಳೂರು, ದಿನಾಂಕ: 12.01.2016 ರಲ್ಲಿ ಸರ್ಕಾರದ ಆದೇಶ ಸಂಖ್ಯೆ: ನಅಇ 27 ಬಿಎಂಆರ್ 2014, ದಿ: 05.03.2014 ನ್ನು ಪರಿಷ್ಕರಿಸಿ ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶದ ತಾತ್ಕಾಲಿಕ ಅನುಮೋದಿತ ಕರಡು ಮಹಾಯೋಜನೆಗೆ ಸಾರ್ವಜನಿಕರಿಂದ ಸ್ವೀಕರಿಸಿರುವ ಸಲಹೆ/ ಅಭಿಪ್ರಾಯಗಳನ್ನು ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಇವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಅಧಿಕಾರಿಗಳ ಸಮಿತಿಯು ಪರಿಶೀಲಿಸಿ ಸಲ್ಲಿಸುವ ಬದಲಿಗೆ ಹೊಸಕೋಟೆ ಯೋಜನಾ ಪ್ರಾಧಿಕಾರವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 13(2) ರ ಅಡಿಯಲ್ಲಿ ಸ್ವೀಕರಿಸಲಾದ

ಸಾರ್ವಜನಿಕ ಸಲಹೆ/ ಅಭಿಪ್ರಾಯಗಳನ್ನು ಪರಿಶೀಲಿಸಿ, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಮುಖಾಂತರ ಸರ್ಕಾರದ ಅನುಮೋದನೆಗೆ ಸಲ್ಲಿಸುವಂತೆ ಆದೇಶಿಸಲಾಗಿರುತ್ತದೆ.

ಆದರೆ, ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಸದರಿ ಮಹಾಯೋಜನೆಯನ್ನು ಹೊಸಕೋಟೆ ಯೋಜನಾ ಪ್ರಾಧಿಕಾರದಿಂದ ಅಂತಿಮಗೊಳಿಸಿ ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಿರುವ ಸರ್ಕಾರದ ಆದೇಶ ಸಂಖ್ಯೆ: ನಅಇ 152 ಬಿಎಂಆರ್ 2013, ಬೆಂಗಳೂರು, ದಿನಾಂಕ: 12.01.2016 ರ ಮೇಲೆ ಹೂಡಲಾದ [ರಿಟ್ ಪಿಟಿಷನ್ ಸಂ: 4188/2016 (LB-RES)] ರಲ್ಲಿ ಘನ ನ್ಯಾಯಾಲಯವು ಸರ್ಕಾರದ ದಿನಾಂಕ: 12.01.2016 ರ ಆದೇಶಕ್ಕೆ ದಿನಾಂಕ: 28.01.2016 ರಿಂದ ಜಾರಿಗೆ ಬರುವಂತೆ 03 ತಿಂಗಳುಗಳ ಕಾಲ ಮಧ್ಯಂತರ ತಡೆಯಾಜ್ಞೆಯನ್ನು ನೀಡಲಾಗಿದ್ದು, ನಂತರ ಸದರಿ ಮಧ್ಯಂತರ ತಡೆಯಾಜ್ಞೆಯನ್ನು 8 ವಾರಗಳ ಕಾಲ ಮುಂದುವರಿಸಿತ್ತು.

ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 14.07.2016 ರಲ್ಲಿ ದಿನಾಂಕ: 28.01.2016 ರಂದು ನೀಡಲಾಗಿದ್ದ ತಡೆಯಾಜ್ಞೆಯನ್ನು ಈ ಕೆಳಕಂಡಂತೆ ಮಾರ್ಪಡಿಸಿ ಆದೇಶ ಹೊರಡಿಸಿರುತ್ತದೆ.

"The Interim Order is modified and the respondents action will remain subject to the decision of this court in the present writ Petitions".

ಪ್ರಾಧಿಕಾರದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ದಿನಾಂಕ: 19.08.2016, 26.08.2016, 21.01.2017, 28.01.2017 ಮತ್ತು 09.02.2017 ರಂದು ಒಟ್ಟು 05 ಸಭೆಗಳನ್ನು ನಡೆಸಲಾಗಿದ್ದು, ಸದರಿ ಸಭೆಗಳ ನಡವಳಿಗಳ ನಿರ್ಣಯಕ್ಕೆ ಅನುಗುಣವಾಗಿ ನಕ್ಷೆಗಳನ್ನು ತಯಾರಿಸಿ ಬಹುತೇಕ ಪೂರ್ಣಗೊಳಿಸಿ ಸರ್ಕಾರಕ್ಕೆ ಸಲ್ಲಿಸುವ ಹಂತದಲ್ಲಿದ್ದು, ಸಧ್ಯದಲ್ಲಿಯೆ ಸರ್ಕಾರದ ಅನುಮೋದನೆಗೆ ಸಲ್ಲಿಸಲು ಕ್ರಮ ವಹಿಸಲಾಗುತ್ತಿದೆ.

6) **ಮಾಹಿತಿ ಹಕ್ಕು ಕಾಯ್ದೆ, 2005 ರಡಿ ಮಾಹಿತಿಯನ್ನು ಕೋರಿರುವ ಬಗ್ಗೆ:** ಮಾಹಿತಿ ಹಕ್ಕು ಕಾಯ್ದೆ, 2005 ರಡಿ 2016-17 ನೇ ಸಾಲಿನಲ್ಲಿ ಒಟ್ಟು 82 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಹಿಂದಿನ ಸಾಲಿನ ಅಂದರೆ 2015-16 ನೇ ಸಾಲಿನ 01 ಅರ್ಜಿಯನ್ನು ಒಳಗೊಂಡಂತೆ ಒಟ್ಟು 83 ಅರ್ಜಿಗಳ ಪೈಕಿ **76** ಅರ್ಜಿಗಳಿಗೆ 2016-17 ನೇ ಸಾಲಿನಲ್ಲಿ ನಿಗದಿತ ಅವಧಿಯೊಳಗೆ ಸೂಕ್ತ ಮಾಹಿತಿಯನ್ನು ಒದಗಿಸಲಾಗಿರುತ್ತದೆ. ಉಳಿದ 07 ಅರ್ಜಿಗಳಿಗೆ ಸಂಬಂಧಿಸಿದಂತೆ ನಿಗದಿತ ಅವಧಿಯೊಳಗೆ ಮಾಹಿತಿ ಒದಗಿಸಲು ಕ್ರಮ ವಹಿಸಲಾಗಿರುತ್ತದೆ.

7) **ಪ್ರಾಧಿಕಾರದ ಸ್ವೀಕೃತಿ ಮತ್ತು ರವಾನೆಗಳ ವಿವರ:** ಹೊಸಕೋಟೆ ಯೋಜನಾ ಪ್ರಾಧಿಕಾರದಲ್ಲಿ 2016-17 ನೇ ಸಾಲಿನಲ್ಲಿ ಒಟ್ಟು 1440 ಅರ್ಜಿಗಳು ಸ್ವೀಕೃತಿಯಾಗಿದ್ದು, ಒಟ್ಟು 1450 ಪತ್ರಗಳನ್ನು ರವಾನಿಸಲಾಗಿರುತ್ತದೆ.

ಪ್ರಾಧಿಕಾರದ ಸಭೆಗಳು:

ಪ್ರಸ್ತುತ ಸಾಲಿನಲ್ಲಿ ಪ್ರಾಧಿಕಾರದಲ್ಲಿ ಒಟ್ಟು 06 ಸಭೆಗಳನ್ನು ನಡೆಸಲಾಗಿದ್ದು, ಸದರಿ ಸಭೆಗಳಲ್ಲಿ ಕೈಗೊಂಡ ತೀರ್ಮಾನಗಳನ್ನು ನಿಯಮಾನುಸಾರ ಕಾರ್ಯಗತಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಹೊಸಕೋಟೆ ಯೋಜನಾ ಪ್ರಾಧಿಕಾರದ ಕಛೇರಿಯ ಸಿಬ್ಬಂದಿ ವಿವರ:

ಸರ್ಕಾರದ ಆದೇಶ ಸಂಖ್ಯೆ: 1) ನಅಇ 83 ನಯೋಸೇ 2009, ಬೆಂಗಳೂರು, ದಿನಾಂಕ: 25.06.2009, 2) ನಅಇ / ಬಿಎಂಆರ್ / 2009, ಬೆಂಗಳೂರು, ದಿನಾಂಕ: 10.08.2009, 3) ನಅಇ 257 ಬಿಎಂಆರ್ 2010, ಬೆಂಗಳೂರು, ದಿನಾಂಕ: 06.10.2010 ಮತ್ತು 4) ನಅಇ 97 ಬಿಎಂಆರ್ 2012, ಬೆಂಗಳೂರು, ದಿನಾಂಕ: 16.05.2013 ರಲ್ಲಿ ಹೊಸಕೋಟೆ ಯೋಜನಾ ಪ್ರಾಧಿಕಾರಕ್ಕೆ ಈ ಕೆಳಕಂಡ ಹುದ್ದೆಗಳನ್ನು ತಾತ್ಕಾಲಿಕವಾಗಿ ಸೃಜಿಸಿ ಈ ಹುದ್ದೆಗಳನ್ನು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ನಿಯೋಜನೆಯ ಮೇಲೆ ಭರ್ತಿ ಮಾಡಲು ಸೂಚಿಸಿದೆ. ಹಾಗೂ ಸರ್ಕಾರದ ಆದೇಶ ಸಂ: ನಅಇ 93 ನಯೋಸೇ 2009, ದಿನಾಂಕ: 26.08.2009 ರಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರನ್ನು ಸದಸ್ಯ ಕಾರ್ಯದರ್ಶಿಯನ್ನಾಗಿ ನೇಮಿಸಿ ಆದೇಶಿಸಲಾಗಿದೆ. ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 164 ನಯೋಸೇ 2016, ದಿನಾಂಕ: 28.09.2016 ರಲ್ಲಿ ಒಬ್ಬ ನಗರ ಯೋಜಕರನ್ನು ನಿಯೋಜನೆಯ ಮೇಲೆ ವರ್ಗಾಯಿಸಿ ಆದೇಶಿಸಲಾಗಿರುತ್ತದೆ. ಪ್ರಾಧಿಕಾರದ ಹಾಲಿ ಸಿಬ್ಬಂದಿಯ ವಿವರ ಈ ಕೆಳಕಂಡಂತಿದೆ.

ಕ್ರ.ಸಂ.	ಹುದ್ದೆಯ ಪದನಾಮ	ಮಂಜೂರಾದ ಹುದ್ದೆ	ಭರ್ತಿ ಆಗಿರುವ ಹುದ್ದೆ	ಖಾಲಿ ಇರುವ ಹುದ್ದೆ
1.	ಜಂಟಿ ನಿರ್ದೇಶಕರು/ಸದಸ್ಯ-ಕಾರ್ಯದರ್ಶಿ	01	01	–
2.	ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು	01	01	–
3.	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು	01	01	–
4.	ನಗರ ಯೋಜಕರು	01	01	–
5.	ಸಹಾಯಕ ನಗರ ಯೋಜಕರು	02	–	02
ಒಟ್ಟು		06	04	02

ಪ್ರಸ್ತುತ 2016-17 ನೇ ಸಾಲಿನಲ್ಲಿ ಈ ಕೆಳಕಂಡ ಅಧಿಕಾರಿಗಳು ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ.

ಕ್ರ. ಸಂ.	ಅಧಿಕಾರಿಗಳ ಹೆಸರು	ಹುದ್ದೆಯ ಪದನಾಮ
1.	ಶ್ರೀ ಹೆಚ್. ಎಂ. ಮಲ್ಲಿಕಾರ್ಜುನ ಸ್ವಾಮಿ	ಸದಸ್ಯ-ಕಾರ್ಯದರ್ಶಿ / ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
2.	ಶ್ರೀ ವಿ. ಉದಯ ಶಂಕರ್ (ದಿ: 05.10.2016 ರವರೆಗೆ) ಶ್ರೀ ಜಿ. ಎನ್. ಪರಮೇಶ್ವರ (ದಿ: 05.10.2016 ರಿಂದ)	ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು
3.	ಶ್ರೀ ಡಿ.ಟಿ. ನರಸಿಂಗರಾವ್	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು
4.	ಶ್ರೀಮತಿ ಅನಿತ ಬಿ.ಎಲ್. (ದಿ: 01.12.2016 ರಿಂದ)	ನಗರ ಯೋಜಕರು

ಪ್ರಾಧಿಕಾರದ ದೈನಂದಿನ ಕೆಲಸ ಕಾರ್ಯಗಳ ನಿರ್ವಹಣೆಗಾಗಿ ಬಾಹ್ಯ ಆಕರ (Out Source) ದಿಂದ ಈ ಕೆಳಕಂಡ ನೌಕರರ ಸೇವೆಯನ್ನು ಪಡೆಯಲಾಗುತ್ತಿದೆ.

1.	ತಾಂತ್ರಿಕ ಸಹಾಯಕರು–2
2.	ಎರಡನೇ ದರ್ಜೆ ಸಹಾಯಕರು–1
3.	ಕಿರಿಯ ತಾಂತ್ರಿಕ ಸಹಾಯಕರು–1 (ದಿ: 08.08.2016 ವರೆಗೆ)
4.	ಡಿ.ಇ.ಒ–1
5.	ಗ್ರೂಪ್–ಡಿ–3

ಪ್ರಾಧಿಕಾರದ ವಾಹನಗಳ ವಿವರ:

ಹೊಸಕೋಟೆ ಯೋಜನಾ ಪ್ರಾಧಿಕಾರದಲ್ಲಿ 2016–17 ನೇ ಸಾಲಿನಲ್ಲಿ ಮಾಸಿಕ ಬಾಡಿಗೆ ಆಧಾರದ ಮೇಲೆ 02 ಎ.ಸಿ ಮತ್ತು 02 ಎ.ಸಿ. ರಹಿತ ವಾಹನಗಳನ್ನು ಜನವರಿ–2017 ರ ವರೆಗೆ ಮೆ॥ ಬಸವ ಟೂರ್ಸ್ ಅಂಡ್ ಟ್ರಾವೆಲ್ಸ್ ರವರಿಂದ ಪಡೆಯಲಾಗಿರುತ್ತದೆ. ಆದರೆ, ಮೆ॥ ಬಸವ ಟೂರ್ಸ್ ಅಂಡ್ ಟ್ರಾವೆಲ್ಸ್ ರವರು ವಾಹನಗಳನ್ನು ಸರಿಯಾಗಿ ಒದಗಿಸದೇ ಇರುವ ಕಾರಣ ಸದರಿಯವರ ಕರಾರನ್ನು ರದ್ದುಪಡಿಸಿ ಮೆ॥ ಶ್ರೀ ವೀರಭದ್ರೇಶ್ವರ ಟೂರ್ಸ್ ಅಂಡ್ ಟ್ರಾವೆಲ್ಸ್ ರವರಿಂದ ಫೆಬ್ರವರಿ–2017 ರಿಂದ ಪಡೆಯಲಾಗಿರುತ್ತದೆ.

ಪ್ರಾಧಿಕಾರದ ಸ್ವಂತ ಕಛೇರಿ ಕಟ್ಟಡ ನಿರ್ಮಿಸಿರುವ ಬಗ್ಗೆ:

ಹೊಸಕೋಟೆ ಗ್ರಾಮದ ಸ.ನಂ. 369/1 ಮತ್ತು 370/1 ರಲ್ಲಿನ 04 ಎಕರೆ 38 ಗುಂಟೆ ಜಮೀನಿನ ಅನುಮೋದಿತ ವಿನ್ಯಾಸದಲ್ಲಿ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಲಾದ 1005 ಚ.ಮೀ. ವಿಸ್ತೀರ್ಣದ ನಿವೇಶನದಲ್ಲಿ ಪ್ರಾಧಿಕಾರದ ಕಛೇರಿ ಕಟ್ಟಡ ನಿರ್ಮಿಸುವ ಸಂಬಂಧ (ದಿನಾಂಕ: 24.06.2010 ರಂದು ಜರುಗಿದ 26 ನೇ ಪ್ರಾಧಿಕಾರದ ಸಭೆಯಲ್ಲಿ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ತೀರ್ಮಾನಿಸಲಾಗಿತ್ತು. ಕಛೇರಿ ಕಟ್ಟಡವನ್ನು ಅಧಿಕೃತ ಸರ್ಕಾರಿ ಸಂಸ್ಥೆ ಮುಖಾಂತರ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ, ಲೋಕೋಪಯೋಗಿ ಇಲಾಖೆ ಸಲ್ಲಿಸಲಾದ ರೂ. 100,00,000/– (ನೂರು ಲಕ್ಷ ರೂಪಾಯಿಗಳು ಮಾತ್ರ) ಗಳ ಅಂದಾಜು ಪಟ್ಟಿಗೆ ಅನುಮೋದನೆ ನೀಡಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು). ಸರ್ಕಾರದ ಆದೇಶ ಸಂಖ್ಯೆ: ನಅಇ 274 ಬಿಎಂಆರ್ 2010, ಬೆಂಗಳೂರು, ದಿನಾಂಕ: 16.03.2011 ರನ್ವಯ ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ಪಡೆದು ದಿನಾಂಕ: 17.01.2013 ರಿಂದ ನೂತನ ಕಛೇರಿ ಕಟ್ಟಡದಲ್ಲಿ ಕಾರ್ಯ ನಿರ್ವಹಿಸಲಾಗುತ್ತಿರುತ್ತದೆ.

ಪ್ರಾಧಿಕಾರದ ಆಯವ್ಯಯ(Budget):

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 68(ಬಿ) ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಗಳು, 1965 ರ ನಿಯಮ 22 ರನ್ವಯ ಹೊಸಕೋಟೆ ಯೋಜನಾ ಪ್ರಾಧಿಕಾರದ 2017–18 ನೇ ಸಾಲಿನ ಆಯವ್ಯಯವನ್ನು ತಯಾರಿಸಿ ದಿನಾಂಕ:

21.01.2017 ರಂದು ನಡೆದ ಪ್ರಾಧಿಕಾರದ 66ನೇ ಸಾಮಾನ್ಯ ಸಭೆಯಲ್ಲಿ ಮಂಡಿಸಿ, ಸಭೆಯ ಅನುಮೋದನೆ ಪಡೆದು ಆಯವ್ಯಯವನ್ನು ಅನುಮೋದನೆಗಾಗಿ ದಿನಾಂಕ: 27.01.2017 ರಂದು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.

ಆದರೆ, ಸರ್ಕಾರದ ಆದೇಶ ಸಂಖ್ಯೆ: ನಅಇ 118 ಬಿಎಂಆರ್ 2015, ಬೆಂಗಳೂರು, ದಿನಾಂಕ: 27.03.2017 ರಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಸ್ಥಳೀಯ ಯೋಜನಾ ಪ್ರಾಧಿಕಾರಗಳಲ್ಲಿ ಲಭ್ಯವಿರುವ ಹಣದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದಕ್ಕೆ ಸಂಬಂಧಿಸಿದಂತೆ ಮುಂದಿನ ಆದೇಶದವರೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 200 ಬಿಎಂಆರ್ 2010, ಬೆಂಗಳೂರು, ದಿನಾಂಕ: 19.09.2011 ರನ್ವಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಆದೇಶಿಸಿರುತ್ತದೆ. ಸದರಿ ಸರ್ಕಾರದ ಆದೇಶದನ್ವಯ ಶೇ. 25 ರಷ್ಟು ಮೊತ್ತವನ್ನು ಆಡಳಿತಾತ್ಮಕ ವೆಚ್ಚಗಳಿಗಾಗಿ ಹಾಗೂ ಉಳಿಕೆ ಶೇ. 75 ರಷ್ಟು ಮೊತ್ತವನ್ನು ಅಭಿವೃದ್ಧಿ ಕಾಮಗಾರಿಗಳಿಗಾಗಿ ಮೀಸಲಿಡಲು ಅವಕಾಶ ಕಲ್ಪಿಸಲಾಗಿದ್ದು, ಸದರಿ ಆದೇಶಕ್ಕೆ ಅನುಗುಣವಾಗಿ ಕೆಲವೊಂದು ಮಾರ್ಪಾಡುಗಳನ್ನು ಮಾಡುವ ಅವಶ್ಯಕತೆ ಉಂಟಾಗಿರುತ್ತದೆ.

ಆದುದರಿಂದ, ದಿನಾಂಕ: 27.01.2017 ರಂದು ಸರ್ಕಾರಕ್ಕೆ ಸಲ್ಲಿಸಲಾದ ಪ್ರಾಧಿಕಾರದ 2017-18 ನೇ ಸಾಲಿನ ಆಯ-ವ್ಯಯವನ್ನು ಮಾರ್ಪಡಿಸಿ/ಪರಿಷ್ಕರಿಸಿ 04.04.2017 ರಂದು ನಡೆದ ಹೊಸಕೋಟೆ ಯೋಜನಾ ಪ್ರಾಧಿಕಾರದ 68ನೇ ವಿಶೇಷ ಸಭೆಯಲ್ಲಿ ಮಂಡಿಸಿ, ಸಭೆಯ ಅನುಮೋದನೆ ಪಡೆದು ಆಯವ್ಯಯವನ್ನು ಅನುಮೋದನೆಗಾಗಿ ದಿನಾಂಕ: 19.04.2017 ರಂದು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.

ಪ್ರಾಧಿಕಾರದ ಆದಾಯ ಮತ್ತು ವೆಚ್ಚಗಳು:

2016-17 ನೇ ಸಾಲಿನ ಆದಾಯ ಮತ್ತು ವೆಚ್ಚಗಳು ಈ ಕೆಳಕಂಡಂತಿರುತ್ತದೆ.

ಕ್ರ.ಸಂ	ತಿಂಗಳು	ಆದಾಯ ರೂ.ಗಳಲ್ಲಿ	ಠೇವಣಿ ಹೂಡಿಕೆ ಮತ್ತು ವೆಚ್ಚ ರೂ.ಗಳಲ್ಲಿ
01	ಏಪ್ರಿಲ್-16	3,14,93,817	6,12,22,720
02.	ಮೇ-16	7,92,44,654	4,80,05,103
03.	ಜೂನ್-16	42,25,557	4,23,861
04.	ಜುಲೈ-16	88,83,204	4,19,48,115
05.	ಆಗಸ್ಟ್-16	21,90,486	38,16,736
06	ಸೆಪ್ಟೆಂಬರ್-16	48,92,957	3,88,90,205
07.	ಅಕ್ಟೋಬರ್-16	8,57,92,695	7,79,28,952
08.	ನವೆಂಬರ್-16	2,63,600	77,61,581
09.	ಡಿಸೆಂಬರ್-16	17,21,62,299	15,47,61,220
10.	ಜನವರಿ-17	49,974	2,63,593
11.	ಫೆಬ್ರವರಿ-17	4,39,25,601	4,21,46,560
12.	ಮಾರ್ಚ್-17	72,23,536	1,04,51,815

FORM V

Balance Sheet of the Town Planning Authority as at the end of 31 st March 2017

Liabilities	Amount (Rs.)	Assets	Amount (Rs.)
1. Amount received from Government by way of -		1. Lands and Buildings (Book value)	100,00,000
(i) Loans	-	2. Tools and plant	5,18,855
(ii) Advances	-	3. Advances (recoverable)	-
(iii) Grants	-	4. Other items of assets	-
2. Outstanding liabilities	-	5. a) Cash on hand	-
3. Deposits	41,51,98,400	b) Cash at Bank	2,03,18,003
4. Excess of income over expenditure	-	6. Imprest	-
Total	41,51,98,400	Total	3,08,36,858

ಅನುಬಂಧ –1

ಸರ್ಕಾರದ ಅಧಿಸೂಚನೆ ಸಂಖ್ಯೆ: ನ ಅಇ 36 ಬಿಎಂಆರ್ 2016, ದಿನಾಂಕ:24.06.2016 ರನ್ವಯ ಉಪನಗರ ವರ್ತುಲ ರಸ್ತೆ (STRR) ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡುವ ಗ್ರಾಮಗಳ ಪಟ್ಟಿ.

ಕ್ರ.ಸಂ.	ಗ್ರಾಮ	ವಿಸ್ತೀರ್ಣ (ಹೆಕ್ಟರ್)	ಜನಸಂಖ್ಯೆ
1) ಸೂಲಿಬೆಲೆ ಹೋಬಳಿಯ ಗ್ರಾಮಗಳ ವಿವರ			
1	ಅರಸನಹಳ್ಳಿ	66.14	695
2	ರಾಮಪುರ	57.17	133
3	ಕದರನಪುರ	49.25	259
4	ಸೂಲಿಬೆಲೆ	574.5	8205
5	ವಲಗೆರೆಪುರ	73.97	449
6	ಅತ್ತಿಬೆಲೆ	253.88	1542
7	ಯತ್ತಿನವಡೆಯರಪುರ	85.3	303
8	ಸಾದಪ್ಪನಹಳ್ಳಿ	238.33	549
9	ಯನಗುಂಟೆ	267.17	1279
10	ಕಮ್ಮಸಂದ್ರ	292.82	1301
11	ಎಂ.ಸತ್ಯವಾರ	221.33	772
12	ಹಸಿಗಾಳ	237.67	1178
13	ಸೊಣ್ಣಹಳ್ಳಿಪುರ	259.7	989
14	ಶಿವದೇನಹಳ್ಳಿ	49.56	217
15	ತಿಮ್ಮಸಂದ್ರ	105.79	555
ಒಟ್ಟು (1)		2832.58	18426
2) ಕಸಬಾ ಹೋಬಳಿಯ ಗ್ರಾಮಗಳ ವಿವರ			
1	ಲಕ್ಕೊಂಡಹಳ್ಳಿ	430.24	1579
2	ವಾಬಸಂದ್ರ	113.34	642
3	ದೊಡ್ಡಅಮಾನಿಕೆರೆ	787.6	59
4	ಚಿಕ್ಕಗಟ್ಟಿಗನಬ್ಬೆ	171.55	729
5	ದೊಡ್ಡಗಟ್ಟಿಗನಬ್ಬೆ	129.01	369
6	ಪೂಜೇನಅಗ್ರಹಾರ	193.24	1118
7	ಭಕ್ತರಹಳ್ಳಿ	93.4	1004
8	ನಡುವತ್ತಿ	283.68	1818
9	ಮಲ್ಲಸಂದ್ರ	229.97	1706
10	ಕೊರಳೂರು	299.96	1263
11	ಅಪ್ಪಾಜಿಪುರ	55.95	55
ಒಟ್ಟು (2)		2787.94	10342

3) ಜಡಿಗೇನಹಳ್ಳಿ ಹೋಬಳಿಯ ಗ್ರಾಮಗಳ ವಿವರ			
1	ಕೋಡಿಹಳ್ಳಿ	336.72	736
2	ಕಾಚರಕನಹಳ್ಳಿ	180.81	437
ಒಟ್ಟು (3)		517.53	1173
4) ಅನುಗೊಂಡನಹಳ್ಳಿ ಹೋಬಳಿಯ ಗ್ರಾಮಗಳ ವಿವರ			
1	ತಿರುಮಲಶೆಟ್ಟಿಹಳ್ಳಿ	129.99	785
2	ಸಮೇತನಹಳ್ಳಿ	463.87	2425
3	ಬೋದನಹೊಸಹಳ್ಳಿ	200.89	1269
4	ದೊಡ್ಡದುನ್ನಸಂದ್ರ	238.11	1677
5	ದೇವಲಪುರ	146.68	446
6	ದೇವನಗುಂದಿಹೊಸಹಳ್ಳಿ	155.41	824
7	ಓಬಳಾಪುರ	103.72	361
8	ಹೆಮ್ಮಂಡಹಳ್ಳಿ	107.09	156
9	ಮುತ್ಕೂರು	344.6	1769
10	ಅನುಗೊಂಡನಹಳ್ಳಿ	176.45	878
11	ಯಡಗೊಂಡಹಳ್ಳಿ	184.6	572
12	ಬೈರಹಳ್ಳಿ	31.2	0
13	ಮೇಡಿಮಲ್ಲಸಂದ್ರ	268.49	2446
14	ಹಂದೇನಹಳ್ಳಿ	256.11	872
15	ಎಸ್.ನಾರಾಯಣಕೆರೆ	512.84	1521
16	ಕಲ್ಕುಂಟೆಅಗ್ರಹಾರ	352.67	1528
17	ಅರೆಹಳ್ಳಿ	281.79	773
18	ತಾತನೂರು	301.51	864
19	ತಾತನೂರು ಪ್ಲಾಟೇಂಶನ್	68.23	0
20	ಗಣಗಲೂರು	421.29	473
21	ತಿರುವರಂಗ	283.29	735
22	ಬಾಗೂರು	220.75	892
23	ಗುಂಡೂರು	236.61	679
ಒಟ್ಟು (4)		5486.19	21945
ಒಟ್ಟು (1+2+3+4)		11624.24	51886

ಅನುಬಂಧ-2

ಹೊಸಕೋಟೆ ಯೋಜನಾ ಪ್ರಾಧಿಕಾರದ 2015-16 ನೇ ಸಾಲಿನ ವರ್ಗೀಕೃತ ಜಮಾ ಹಾಗೂ ಖರ್ಚಿನ ವಿವರ

ಕ್ರ. ಸಂ	ಸ್ವೀಕೃತಿ	ಮೊತ್ತ	ಖರ್ಚು	ಮೊತ್ತ
1	ದಿ: 01.04.2015 ಕ್ಕೆ ಪ್ರಾರಂಭಿಕ ಶೀಲ್ಕು	3,46,51,695	ಅಧಿಕಾರಿಗಳ ವೇತನ ಮತ್ತು ಡಿ.ಎ	20,31,146
2	ಬ್ಯಾಂಕ್ ಬಡ್ಡಿ	12,30,720	ಅಧ್ಯಕ್ಷರ ಗೌರವ ಧನ/ಭತ್ಯೆ	1,58,516
3	ಪರಿಶೀಲನಾ ಶುಲ್ಕ & ಉಸ್ತುವಾರಿ ಶುಲ್ಕ	13,91,459	ಹೊರ ಗುತ್ತಿಗೆ ನೌಕರರ ವೇತನ	10,27,548
4	ಕಟ್ಟಡ / ನಿವೇಶನ ಅನುಮೋದನೆ ಶುಲ್ಕ	24,86,379	ಕಛೇರಿ ಉಪಯೋಗಕ್ಕೆ ಪಡೆದಿರುವ ವಾಹನಗಳ ಬಾಡಿಗೆ	9,51,300
5	ಉತ್ತಮತೆ / ವಿನ್ಯಾಸ ಅನುಮೋದನೆ ಶುಲ್ಕ	1,85,55,565	ಸೆಕ್ಯೂರಿಟಿ ಗಾರ್ಡ್‌ಗಳ ವೇತನ	1,85,152
6	ಭೂ-ಉಪಯೋಗ ಬದಲಾವಣೆ ಶುಲ್ಕ	2,76,61,900	ಪೀಠೋಪಕರಣಗಳ ಖರೀದಿ ವೆಚ್ಚ	15,030
7	ಭದ್ರತಾ ಠೇವಣಿ	1,43,04,037	ವಿದ್ಯುತ್ ಬಿಲ್	42,998
8	ಕೆರೆ ಅಭಿವೃದ್ಧಿ ಶುಲ್ಕ	2,84,95,625	ಹೂಡಿಕೆ ಮಾಡಲಾದ ಮೊತ್ತ	29,63,45,737
9	ಮಧ್ಯಂತರ ಮಹಾಯೋಜನೆ/ಮಹಾ ಯೋಜನೆಯ (ತಾ) ನಕ್ಷೆಗಳ ಮಾರಾಟ	8,430	ದೂರವಾಣಿ ಬಿಲ್	27,483
10	ಅರ್ಜಿ/ಐ.ಪಿ.ಓ ಶುಲ್ಕ	9,218	ಜೆರಾಕ್ಸ್ ವೆಚ್ಚ / ಇತರೆ ವೆಚ್ಚ	53,462
11	ಮಹಾ ಯೋಜನೆಯ ಸಿ.ಡಿ. ಮಾರಾಟ	3,100	ಪ್ರಕಟಣಾ ಶುಲ್ಕ	1,83,183
12	ಮಹಾ ಯೋಜನೆಯ ವಲಯ ನಿಯಮಾವಳಿ ಪ್ರತಿಗಳ ಮಾರಾಟ	–	ಬ್ಯಾಂಕ್ ವೆಚ್ಚ	33,517
13	ಹೂಡಿಕೆ ನಗದೀಕರಣ ಮೊತ್ತ (ಬಡ್ಡಿ ಸೇರಿ)	24,48,63,818	ಯು.ಪಿ.ಎಸ್. ಅನ್ನು ಖರೀದಿಸಲು ಭರಿಸಿದ ವೆಚ್ಚ	81,000
14	ದೃಢೀಕೃತ ನಕಲು	16,600	ಪ್ರಿಂಟರ್ ಅನ್ನು ಖರೀದಿಸಲಾದ ವೆಚ್ಚ	16,750
15	ಪ್ರಕಟಣಾ ಶುಲ್ಕ	1,40,000	ಅಭಿವೃದ್ಧಿ ಕಾಮಗಾರಿಗಳಿಗೆ ಪಾವತಿಸಲಾದ ವೆಚ್ಚ	1,19,29,071
16	ಮಹಾ ಯೋಜನೆಯ ಉಪಸ್ಥಿತಿ ಭತ್ಯೆಯನ್ನು ಹಿಂಪಾವತಿ ಮಾಡಿರುವುದು	–	ಕಛೇರಿ ಸ್ವಚ್ಛತೆ	18,000
17	ಬಡ್ಡಿ+ದಂಡ	14,46,071	ಸ್ಟಾಂಪ್ ಖರೀದಿ	10,000
18	ಬ್ಯಾಂಕ್ ನವರು ಹೆಚ್ಚುವರಿಯಾಗಿ ಪಾವತಿಸಲಾದ ಮೊತ್ತ	–	ದಿನ ಪತ್ರಿಕೆಗಳ ಖರೀದಿ	3,120

19	ಬ್ಯಾಂಕ್ ನ ಇತರೆ ಮೊತ್ತ	32,339	ಪ್ರಾಧಿಕಾರದ ವಕೀಲರಿಗೆ ಪಾವತಿಸಲಾದ ಬಿಲ್ಲಿನ ಮೊತ್ತ	70,500
20	ಈ ಹಿಂದೆ ಪಾವತಿಸಲಾದ ಐ.ಟಿ. ಮೊತ್ತದ ಚೆಕ್ ನ ಮೊತ್ತವನ್ನು ಹಿಂದಿರುಗಿಸಲಾದ ಮೊತ್ತವನ್ನು ಮತ್ತೊಮ್ಮೆ ಪಾವತಿಸಲಾಗಿರುವುದು	3,000	ಮಹಾಯೋಜನೆ (ತಾತ್ಕಾಲಿಕ) ಯನ್ನು ತಯಾರಿಸುವ ಸಂಬಂಧ ಪಾವತಿಸಲಾದ ವೆಚ್ಚ	2,85,177
21	–	–	ಕ್ಯಾಟ್ರಿಜ್ಡಸ್ ಗಳನ್ನು ಖರೀದಿಸಲು ಭರಿಸಲಾದ ವೆಚ್ಚ	22,869
22	–	–	ಕೆ.ಎಸ್.ಟಿ.ಪಿ.ಬಿ. ರವರಿಗೆ ಶೇ 5 ರಷ್ಟು ಮೊತ್ತವನ್ನು ಪಾವತಿಸಲಾದ ವೆಚ್ಚ	63,34,243
23	–	–	ಫ್ಲೆಕ್ಸ್ ಬೋರ್ಡ್ ಗಳನ್ನು ತಯಾರಿಸಲು ಭರಿಸಲಾದ ವೆಚ್ಚ	5,820
24	–	–	ಇ-ವಿನ್ಯಾಸದ ಕೀ ಅನ್ನು ಮಾಡಿಸಲು ಭರಿಸಲಾದ ವೆಚ್ಚ	2,500
25	–	–	ನೇಮ್ ಬೋರ್ಡ್ ಗಳನ್ನು ಮಾಡಿಸಲು ಭರಿಸಲಾದ ವೆಚ್ಚ	2,950
26	–	–	ಸೋಲಾರ್ ಬೀದಿ ದೀಪಗಳನ್ನು ಅಳವಡಿಸಿರುವ ಸಂಬಂಧ ಮೆ॥ ಕಿಯೋನಿಕ್ಸ್ ಸಂಸ್ಥೆಯವರಿಗೆ ಪಾವತಿಸಲಾದ ವೆಚ್ಚ	1,83,83,191
27	–	–	ಬ್ಯಾಂಕ್ ನ ಕಣ್ ತಪ್ಪಿನಿಂದ ಹಿಂತಿರುಗಿಸಲಾದ ಡಿ.ಡಿ. ಮೊತ್ತ	4,12,900
28	–	–	ಗಣಕಯಂತ್ರವನ್ನು ರಿಪೇರಿ ಮಾಡಲು ಭರಿಸಲಾದ ವೆಚ್ಚ	3,700
29	–	–	ಮುದ್ರಣ ವೆಚ್ಚ	64,611
30	–	–	ಈ ಹಿಂದೆ ಪಾವತಿಸಲಾದ ಐ.ಟಿ. ಮೊತ್ತದ ಚೆಕ್ ಅನ್ನು ಬ್ಯಾಂಕ್ ನ ಕಣ್ ತಪ್ಪಿನಿಂದ ಹಿಂದಿರುಗಿಸಲಾಗಿದ್ದು ಮತ್ತೊಮ್ಮೆ ಪಾವತಿಸಲಾದ ಐ.ಟಿ. ಮೊತ್ತ	3,000
–	–	–	**ಒಟ್ಟು (ಎ)**	**33,87,04,474**
–	–	–	**ದಿ: 31.03.2016 ಕ್ಕೆ ಅಂತಿಮ ಶಿಲ್ಕು (ಜಿ)**	**3,65,95,482**
ಒಟ್ಟು ರೂ.		**37,52,99,956**	**ಒಟ್ಟು ರೂ. (ಎ+ಜಿ)**	**37,52,99,956**

ಸಹಿ/-

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ,
ಹೊಸಕೋಟೆ.